# ಪಾತಪಲ್ಲಿಯ ಮುತ್ತು

■ ಪ್ರವೀಣ ಕುಲಕರ್ಣಿ

ಸಾಮಾನ್ಯರಲ್ಲಿ ಸಾಮಾನ್ಯರಾಗಿ, ಅನಂತವನ್ನು ಸಾಧಿಸಿದರೂ ನಿರ್ಗರ್ವಿಯಾಗಿ, ಪ್ರಕೃತಿಗೆ ಎಲ್ಲಿ ನೋವಾಗುವುದೋ ಎಂದು ಎಲ್ಲ 'ಭಾರ'ವನ್ನು ಕಳೆದುಕೊಂಡು ಹೂವಾಗಿ, ಗುರು ತೋರಿದ ಮಾರ್ಗದಲ್ಲಿ ದೂರ ದೂರ ಸಾಗಿ, ಕೊನೆಗೆ ಗುರುವಿನಲ್ಲೇ ಒಂದಾಗಿ, ಆಧ್ಯಾತ್ಮಿಕ ಶಕ್ತಿಯಾಗಿ ಹೊರಹೊಮ್ಮಿದಂತಹ ಯೋಗಿ ಯಾರಾದರೂ ಇದ್ದಾರೆಯೇ? ಯಾಕಿಲ್ಲ, ಸಹಜ ಮಾರ್ಗದಲ್ಲಿ ಸಾಗಿ, ಗುರುವಿನಿಂದ ಪಡೆದ ಬೆಳಕಿನಿಂದ ಚಂದಿರನಂತೆ ಹೊಳೆದ ರಾಘವೇಂದ್ರ ರಾಯರ ಕಡೆಗೊಮ್ಮೆ ನೋಡಿ. 'ಅಬ್ಬಾ! ಯೋಗಿಯ ಬದುಕು ಎಷ್ಟೊಂದು ಸರಳ, ಎಷ್ಟೊಂದು ನಿರ್ಮಲ. ಹೌದಾ, ಯೋಗಿಗಳು ಹೀಗೂ ಇರುತ್ತಾರೆಯೇ' ಎಂಬ ಉದ್ಗಾರ ತೆಗೆಯದಿದ್ದರೆ ಕೇಳಿ!

ರಾಜಕೀಯ ಸಾಮ್ರಾಜ್ಯಗಳಿಗಿಂತ ಧರ್ಮ ಸಾಮ್ರಾಜ್ಯಗಳ ರಾಜ್ಯಭಾರವೇ ಜೋರಾಗಿರುವ ಕಾಲಘಟ್ಟ ಇದು. ತಮ್ಮ ತಮ್ಮ ಮತ, ಧರ್ಮ, ಜಾತಿ, ಪೀಠಗಳ ಹಿರಿಮೆಗಾಗಿ ಮಾನವೀಯತೆಯನ್ನು ಮರೆತು ವರ್ತಿಸುವ ಸ್ವಾಮೀಜಿಗಳೇ ನಮ್ಮ ನಡುವೆ ತುಂಬಿದ್ದಾರೆ. ಮಠ, ಮಠಗಳ ನಡುವೆ, ಧಾರ್ಮಿಕ ಮುಖಂಡರ ನಡುವೆ ತೊಡೆ ತಟ್ಟುವ ಪ್ರಸಂಗಗಳಿಗೂ ನಮ್ಮ ಸಮಾಜ ಸಾಕ್ಷಿಯಾಗಿದ್ದಿದೆ. ಅರಣ್ಯ ಭೂಮಿ, ನದಿ, ಬೆಟ್ಟ ಪ್ರದೇಶಗಳನ್ನು ಎಷ್ಟೋ ಮಠಗಳು, ಧಾರ್ಮಿಕ ಕೇಂದ್ರಗಳು, ಆ ಕೇಂದ್ರಗಳ ನೇತಾರರು ಆಪೋಶನ ತೆಗೆದುಕೊಂಡ ಘಟನೆಗಳು ಕೂಡ ಹತ್ತು–ಹಲವಾರು ಇವೆ. ಆದರೆ, ಸ್ಥಾವರದ ಅರಿವೇ ಇಲ್ಲದೆ, ಒಂದು ರೀತಿಯಲ್ಲಿ ಜಂಗಮರಾಗಿ ಆಧ್ಯಾತ್ಮಿಕ ಯಾತ್ರೆಯನ್ನು ಕೈಗೊಂಡವರು, ನಿಸರ್ಗದೊಂದಿಗೆ ಒಂದಾಗಿ ಬಾಳಿದವರು ಸಹಜ ಮಾರ್ಗದ ಸಂತರು. ಅಂತಹ ಸಂತರ ಸಾಲಿನಲ್ಲಿ ರಾಘವೇಂದ್ರ ರಾಯರೂ ಒಬ್ಬರು. ಕಳೆದ ವಾರವಷ್ಟೇ ಅವರ ಜನ್ಮ ಶತಮಾನೋತ್ಸವವನ್ನು ಆಚರಿಸಿದ ಧಾರವಾಡ, ಗುರು ಕಾರುಣ್ಯದ ಪ್ರೇಮದ ಹೊನಲಿನಲ್ಲಿ ಮಿಂದೆದ್ದಿದೆ.

ಸಂತರಾದವರೇನು ಕಾವಿ ಬಟ್ಟೆಯಲ್ಲಿ ಇರಬೇಕೇ? ಸಂಸಾರವನ್ನು ತೊರೆಯಬೇಕೇ? ಪಲ್ಲಕ್ಕಿಯಲ್ಲಿ ಕುಳಿತು ಶಿಷ್ಯಂದಿರ ಹೆಗಲೇರಬೇಕೇ? ಶಾಲಾ–ಕಾಲೇಜುಗಳನ್ನು ಕಟ್ಟಿ, ಡೊನೇಷನ್ ಅನ್ನು ಜೋಳಿಗೆಗೆ ಇಳಿಸುತ್ತಾ ಕೂರಬೇಕೇ? ನೈಜ ಸಂತನ ಲಕ್ಷಣವೆಂದರೆ ಜನರಲ್ಲಿ ಒಂದಾಗಿ ಬಾಳುವುದು, ಗೃಹಸ್ಥ ಜೀವನವನ್ನು ನಡೆಸುವುದು, ಧರ್ಮದ ಚೌಕಟ್ಟಿನಿಂದ ಆಚೆ ಬಂದು, ಆಧ್ಯಾತ್ಮಿಕ ಸಾಧನೆ ಮಾಡುವುದು, ಸತ್ಯಾನ್ವೇಷಕರಾಗಿ ಸದ್ದಿಲ್ಲದೆ ಜೀವನ ಸಾಗಿಸುವುದು ಎನ್ನುತ್ತದೆ ಸಹಜ ಮಾರ್ಗ. ಉತ್ತರ ಪ್ರದೇಶದ ಷಾಹಜಹಾನ್‌ಪುರದ ರಾಮಚಂದ್ರ (ಬಾಬೂಜಿ) ಇದರ ಮಾರ್ಗಕಾರರು. 'ಧರ್ಮದ ಕೊನೆಯೇ ಅಧ್ಯಾತ್ಮದ ಆರಂಭ' ಎಂದು ಸಾರಿದ ಅಂತಹ ಬಾಬೂಜಿ ಅವರ ಶಿಷ್ಯರತ್ನ ರಾಘವೇಂದ್ರ ರಾಯರು.

ರಾಘವೇಂದ್ರ ರಾಯರು ಹುಟ್ಟಿದ್ದು ತೆಲಂಗಾಣದ ಮೆಹಬೂಬ್‌ನಗರ ಜಿಲ್ಲೆಯ ಪುಟ್ಟ ಹಳ್ಳಿ ಪಾತಪಲ್ಲಿ ಎಂಬಲ್ಲಿ. ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ ಎಂಜಿನಿಯರಿಂಗ್ ಪದವಿ ಪಡೆದಿದ್ದ ಅವರು, ಲೋಕೋಪಯೋಗಿ ಇಲಾಖೆಯಲ್ಲಿ ಎಂಜಿನಿಯರ್ ಆಗಿ ಸೇರಿಕೊಂಡಿದ್ದರು. ಬಳಿಕ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಪ್ರಾಧ್ಯಾಪಕರಾದರು. ಮುಂದೆ ರಾಜ್ಯ ತಾಂತ್ರಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾಗಿ ನಿವೃತ್ತಿ ಹೊಂದಿದರು. ವೃತ್ತಿ ಜೀವನದ ಜತೆ, ಜತೆಗೆ ಆಧ್ಯಾತ್ಮಿಕ ಜೀವನವನ್ನೂ ಅವರು ತುಂಬಾ ಪ್ರೀತಿಯಿಂದ ಅಪ್ಪಿಕೊಂಡವರು. 'ದಿ ಹಿಂದೂ' ಪತ್ರಿಕೆಯಲ್ಲಿ ಒಮ್ಮೆ ಬಾಬೂಜಿ ಅವರ **Reality at Dawn** (ಸತ್ಯೋದಯ) ಎಂಬ ಕೃತಿಯ ಕುರಿತು ಬಂದಿದ್ದ ಬರಹವನ್ನು ಗಮನಿಸಿದ ಅವರು, ಬಾಬೂಜಿ ಅವರ ಸಂಪರ್ಕಕ್ಕೆ ಬಂದರು. ಗುರು–ಶಿಷ್ಯರ ನಡುವೆ 'ಪತ್ರಗಳ ಸಮರ'ವೇ ನಡೆದು, ಇಬ್ಬರ ನಡುವೆ ಪ್ರೇಮದ ಹೊನಲು ಹರಿಯಿತು. ರಾಘವೇಂದ್ರ ರಾಯರು ತಮ್ಮ ಸಂದೇಹಗಳನ್ನು ಪತ್ರದ ಮೂಲಕ ನಿವೇದಿಸಿಕೊಳ್ಳುವುದು, ಬಾಬೂಜಿ ಅವರು ಅದಕ್ಕೆ ಉತ್ತರ ನೀಡುವುದು ವರ್ಷಗಳವರೆಗೆ ನಡೆಯಿತು. ಆ ಪತ್ರಗಳ ಸಂಗ್ರಹವೇ ಒಂದು ದೊಡ್ಡ ಆಧ್ಯಾತ್ಮಿಕ ಕೃತಿಯಾಯಿತು. ದಕ್ಷಿಣ ಭಾರತದ ಮೊದಲ ಅಭ್ಯಾಸಿಯಾದ ರಾಘವೇಂದ್ರ ರಾಯರು, ದಕ್ಷಿಣದ ಎಲ್ಲ ರಾಜ್ಯಗಳಲ್ಲಿ ಆಧ್ಯಾತ್ಮಿಕ ತರಬೇತಿಯನ್ನು ನೀಡಿದವರು ಕೂಡ.

ಬಾಬೂಜಿ ಅವರ, ತನ್ಮೂಲಕ ರಾಘವೇಂದ್ರ ರಾಯರ ಬೋಧನೆ ತುಂಬಾ ಸರಳ. ಆದರೆ, ಅಷ್ಟೇ ಗಹನ. 'ದೇವರನ್ನು ಹೃದಯದಲ್ಲಿ ಹುಡುಕಿ, ಪವಿತ್ರ ಗಳಿಕೆಯೊಂದೇ ಆದಾಯದ ಮೂಲವಾಗಿರಲಿ, ಜಗತ್ತಿನ ಎಲ್ಲರನ್ನೂ ಸಹೋದರ ಭಾವದಿಂದ ಕಾಣಿ, ಯಾರ ಬಗೆಗೂ ಕಹಿಭಾವ ಬೆಳೆಸಿಕೊಳ್ಳಬೇಡಿ, ನಿಸರ್ಗದ ನಿಯಮಗಳಿಗೆ ಅನುಗುಣವಾಗಿ ಬಾಳಿ' – ಅವರ ಒಟ್ಟು ಸಂದೇಶದ ಸಾರವನ್ನು ಹೀಗೆ ಹಿಡಿದಿಡಬಹುದು. ತಮ್ಮ ಗುರುಗಳಂತೆಯೇ ರಾಘವೇಂದ್ರರಾಯರು ರೈಲಿನ ದ್ವಿತೀಯ ದರ್ಜೆ ಬೋಗಿಯಲ್ಲಿ, ಸಾಮಾನ್ಯ ಬಸ್ಸಿನಲ್ಲಿ ಸಂಚರಿಸುತ್ತಿದ್ದರು. ದುಡ್ಡು ಪೋಲು ಮಾಡುವುದಕ್ಕೆ ಅವರು ವಿರುದ್ಧವಾಗಿದ್ದರು. ಏನೇ ಖರ್ಚು ಮಾಡಿದರೂ ಪ್ರತೀ ಪೈಸೆಯ ಲೆಕ್ಕವನ್ನು ಅವರು ಇಡುತ್ತಿದ್ದರು. ಹಿಂದೂ, ಮುಸ್ಲಿಂ, ಕ್ರೈಸ್ತ ಎಂದು ಭೇದಭಾವ ಎಣಿಸದೆ ಎಲ್ಲರಿಗೂ ಸಹಜ ಬದುಕಿನ ದಾರಿ ನೀಡುತ್ತಿದ್ದರು. ಅವರ ಮುಂದೆ ಜಾತಿ–ಅಂತಸ್ತಿನ ಎಲ್ಲ ಗೆರೆಗಳೂ ಅಳಿಸಿಹೋಗಿ ಮಾನವ ಪ್ರೇಮವೊಂದೇ ಮುಂದಡಿ ಇಡುತ್ತಿತ್ತು. ಧ್ಯಾನದ ಮೂಲಕ ನಿಮ್ಮೊಳಗಿನ ಬೆಳಕನ್ನು ಜಾಗೃತಗೊಳಿಸಬೇಕು ಎಂಬ ಸಂದೇಶ ನೀಡಿದ ಅವರು, ಸದಾ ಮುಂಗಾಣ್ಕೆಯ ದೃಷ್ಟಿ ಹೊಂದಿದವರಾಗಿದ್ದರು. ಯೋಗದ ಮೂಲಕ ಬೆಳಕು ಬೀರಿದವರು. ■



Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65